# ಗೋಡೆ

'ಗೋಡೆ' ಎಂಬುದು ಬಯಲನ್ನು ಆಲಯವನ್ನಾಗಿ ಮಾರ್ಪಡಿಸುವ ಒಂದು ಸಾಧನ. ನಾಲ್ಕು ದಿಕ್ಕಿನಲ್ಲಿ ಗೋಡೆ, ಮೇಲೊಂದು ಛಾವಣಿ– ಈ ಆವರಣದಲ್ಲಿ ಮನುಷ್ಯನ ಖಾಸಗೀ ಪ್ರಪಂಚ ಅರಳಿಕೊಳ್ಳುತ್ತದೆ; ಆತನ ಸ್ವಂತಿಕೆ ಕುಡಿಯೊಡೆಯುತ್ತದೆ. ಹೊರಜಗತ್ತಿನ ಅಲೆದಾಟದಿಂದ, ಬದುಕಿನ ಹೋರಾಟದಿಂದ ಬಳಲಿದಾಗ ಇಂಥದೊಂದು ನೆಲೆ ಅವನಿಗೆ ಅಗತ್ಯವೆನ್ನಿಸುತ್ತದೆ. ಮನುಷ್ಯ ನಾಲ್ಕು ಗೋಡೆಗಳ ನಡುವಿನ ಪುಟ್ಟ ಗೂಡಿನಲ್ಲಿ ದೈಹಿಕ ಹಾಗೂ ಭಾವನಾತ್ಮಕ ತೃಪ್ತಿ, ಸಮಾಧಾನಗಳನ್ನು ಅರಸುತ್ತಾನೆ. ಹೊರ ಜಗತ್ತಿನ ಕ್ರೌರ್ಯ ಹಾಗೂ ಅಪಾಯಗಳಿಂದ ರಕ್ಷಣೆಯನ್ನು ಪಡೆಯಲು ಗೋಡೆಗಳನ್ನು ನಿರ್ಮಿಸಬೇಕೆಂಬುದು ಆದಿಮ ಮಾನವನಿಂದ ಆಧುನಿಕ ಮಾನವನವರೆಗೂ ಅವಿಚ್ಛಿನ್ನವಾಗಿ ಹರಿದುಬಂದಿರುವ ಜೀವನ ವಿವೇಕ. ಸಾಮಾನ್ಯರಲ್ಲದೆ, ರಾಜ ಮಹಾರಾಜರೂ ತಮ್ಮ ರಾಜ್ಯದ ರಕ್ಷಣೆಗಾಗಿ ಅಭೇದ್ಯ ಕೋಟೆಗಳನ್ನು ನಿರ್ಮಿಸುತ್ತಿದ್ದರೆಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಮಧ್ಯಕಾಲೀನ ಅದ್ಭುತಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿರುವ ಚೀನಾದ ಮಹಾ ಗೋಡೆ ಮನುಷ್ಯ ಗೋಡೆಯನ್ನು ಕುರಿತಾಗಿ ಇರಿಸಿಕೊಂಡಿರುವ ಭರವಸೆಗೆ ಸಾಕ್ಷಿ ಹೇಳುವಂತಿದೆ. ನಮ್ಮ ನಮ್ಮ ಸರಹದ್ದುಗಳನ್ನು ಸ್ಪಷ್ಟವಾಗಿ ಸೂಚಿಸಲು ಬೇಲಿಯನ್ನೋ, ಗೋಡೆಯನ್ನೋ ಹಾಕಿಕೊಂಡು, ನೆರೆಯವರೊಂದಿಗೆ ಘರ್ಷಣೆಯನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಆದರೆ ಇಂಥ ಗಡಿ ರೇಖೆಗಳೇ ಘರ್ಷಣೆಗೆ ಕಾರಣವಾಗುವ ಸಂಭವವೂ ಇಲ್ಲದಿಲ್ಲ. 'Good fences make good neighbours' ಎಂಬ ರಾಬರ್ಟ್ ಫ್ರಾಸ್ಟ್ ಕವಿಯ ಮಾತು ಸಾರ್ವಕಾಲಿಕ ಹಾಗೂ ಸಾರ್ವತ್ರಿಕ ಸತ್ಯವೇನಲ್ಲ.

ಮಣ್ಣು, ಇಟ್ಟಿಗೆ, ಕಲ್ಲು– ಮುಂತಾದುವುಗಳಿಂದ ನಿರ್ಮಿತವಾಗುವ ಭೌತಿಕ ಗೋಡೆಗಳಂತೆಯೇ ಮನುಷ್ಯರ ಮನಸ್ಸುಗಳಲ್ಲೂ ಅಮೂರ್ತ ರೂಪದ ಗೋಡೆಗಳು ಇದ್ದಕ್ಕಿದ್ದಂತೆ ರೂಪುಗೊಳ್ಳುತ್ತವೆ. ಜಾತಿ, ಮತ, ಸಂಪ್ರದಾಯ, ನಂಬಿಕೆ, ರಾಷ್ಟ್ರ, ಭಾಷೆ, ವರ್ಣ, ವರ್ಗ, ಅಹಂಕಾರ, ಅನುಮಾನ, ಮೇಲರಿಮೆ, ಕೀಳರಿಮೆ– ಇಂಥ ಹಲವಾರು ಸಂಗತಿಗಳೇ ಈ ಮಾನಸಿಕ ಗೋಡೆಗಳ ಇಟ್ಟಿಗೆಗಳು. ಇಂಥ ಗೋಡೆಗಳಿಂದಾಗಿ ಮನುಷ್ಯನ ಬದುಕು ಅಸಹನೀಯವಾಗುತ್ತದೆ; ಆತನ ವ್ಯಕ್ತಿತ್ವ ಮುರುಟಿಕೊಳ್ಳುತ್ತದೆ. ವ್ಯಕ್ತಿಯ ನೆಲೆಯಲ್ಲಿ ಹುಟ್ಟಿಕೊಳ್ಳುವ ಇಂಥ ಗೋಡೆಗಳು ಕೆಲವೊಮ್ಮೆ ಸಮಷ್ಟಿಯ ನೆಮ್ಮದಿಗೂ ಭಂಗ ತರುವ ಸಂಭವವೂ ಇದೆ. ಕುರುಕ್ಷೇತ್ರದಲ್ಲಾದ ಸರ್ವನಾಶಕ್ಕೆ ದುರ್ಯೋಧನನ ಹಟಮಾರಿತನವೆಂಬ ಅಭೇದ್ಯ ಗೋಡೆಯೇ ಕಾರಣವಾಯಿತಲ್ಲವೆ?

ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು ತಮ್ಮ 'ಗೋಡೆ' ಎಂಬ ಕವಿತೆಯಲ್ಲಿ ಇಂಥ ಮಾನಸಿಕ ಗೋಡೆಗಳನ್ನೇ ಕುರಿತು ಚಿಂತನೆ ಮಾಡಿದ್ದಾರೆ. ಎರಡು ಮನಸ್ಸುಗಳ ನಡುವೆ ಯಾವುದೋ ಅನೂಹ್ಯ ಕಾರಣದಿಂದ ಏಳುವ ಗೋಡೆಯ ಮೇಲೆ– 'ಕೆಂಗಣ್ಣು, ಕೆಮ್ಮೀಸೆ, ಮೀಸೆಯ ಕೆಳಗೆ ಸೊಟ್ಟ ಮೂತಿಯ ಕೆಟ್ಟ ಬಾಯಿ ಉಗಿಯುತ್ತದೆ ಬೆಂಕಿ!' ಎನ್ನುತ್ತಾರೆ ಕವಿ. ಸಿಟ್ಟು, ಅಸಹನೆ, ತಾತ್ಸಾರ, ಜುಗುಪ್ಸೆ– ಇಂಥ ವಿಕಾರಗಳಿಂದ ವ್ಯಕ್ತಿ ವ್ಯಕ್ತಿಗಳನ್ನು ವಿಘಟಿಸುವ, ಕ್ಷೋಭೆಗೊಳಿಸುವ ಮಾನಸಿಕ ಗೋಡೆಯ ಚಿತ್ರವನ್ನು ಈ ಮಾತುಗಳು ಕಟ್ಟಿಕೊಡುತ್ತವೆ.

ನಮ್ಮ ಸುತ್ತಲೂ ಸ್ವ–ಇಚ್ಛೆಯಿಂದ ಗೋಡೆಗಳನ್ನು ನಿರ್ಮಿಸಿಕೊಳ್ಳುವ ನಾವು ಶುದ್ಧವಾದ ಗಾಳಿಯಿಂದ, ನಿರ್ಮಲ ಬೆಳಕಿನಿಂದ ವಂಚಿತರಾಗುತ್ತೇವೆ. 'ನಾವಿರುವುದಷ್ಟೇ ಪ್ರಪಂಚ' ಎಂಬ ಕೂಪ ಮಂಡೂಕ ಸ್ಥಿತಿಯನ್ನು ಆವಾಹನೆ ಮಾಡಿಕೊಳ್ಳುತ್ತೇವೆ. ಮುಕ್ತ ಮನಸ್ಸಿನಿಗೆ ಗೋಡೆಯೆಂಬುದು ಒಂದು ಅಡಚಣೆ, ಎಲ್ಲ ಗೋಡೆಗಳನ್ನೂ ದಾಟಿ 'ಜಗದಗಲ' ವಿಸ್ತರಿಸಿಕೊಳ್ಳಬೇಕೆಂಬುದು ಮನುಷ್ಯನ ಬಹುದೊಡ್ಡ ಆದರ್ಶ. 'ಎಲ್ಲಿಯೂ ನಿಲ್ಲದಿರು, ಮನೆಯನೆಂದೂ ಕಟ್ಟದಿರು' ಎಂದು ಕುವೆಂಪು ಕರೆ ಕೊಟ್ಟಿರುವುದು ಇದನ್ನೇ ಸೂಚಿಸುತ್ತದೆ. 'ಆನೋ ಭದ್ರಾ: ಕ್ರತವೋ ಯಂತು ವಿಶ್ವತಃ' (ಎಲ್ಲ ದಿಕ್ಕುಗಳಿಂದಲೂ ಒಳಿತು ಬರುತ್ತಿರಲಿ) ಎಂಬ ಹಾರೈಕೆಯ ಹಿಂದಿರುವುದೂ ಇದೇ ಆಶಯ. ನೆಲ ಬಾನುಗಳ ಮಧ್ಯೆ ಯಾವ ಗೋಡೆಗಳ ಹಂಗಿಲ್ಲದೇ ನಿಂತಿರುವ ಧೀರ ವಿರಾಗಿ ಗೊಮ್ಮಟ ಮೂರ್ತಿ ಸಾರುತ್ತಿರುವುದೂ ಇದೇ ವಿಶ್ವಮಾನವ ಸಂದೇಶವನ್ನೇ!

■ ವೈನತೇಯ

# ಮಾತೇ ಮುತ್ತು

★ನಾನ್ಯಾಕೆ ಬಡವ? ನಾನ್ಯಾಕೆ ಪರದೇಶಿ? ಸೋಮಾರಿ? ಹೇ ಮಾವ ನೀನಿರುವತನಕ.

–ನಾ.ಕಸ್ತೂರಿ

★ಮುದುಕನಾಗುತ್ತಿರುವವನಷ್ಟು ಜೀವನವನ್ನು ಪ್ರೀತಿಸುವವರು ಯಾರೂ ಇಲ್ಲ.

–ಸಾಫೋಕ್ಲಿಸ್

★ಯಾರು ಪ್ರೀತಿಸಬಲ್ಲರೋ ಅವರು ಯಾವುದೇ ಸಂದರ್ಭದಲ್ಲಿ ಮುದುಕರಲ್ಲ.

–ಎಮರ್‌ಸನ್

★ನಾವು ಜನರಿಗಿಂತ ಮೇಲಿನವರು ಎಂದು ತಿಳಿಯಕೂಡದು. ಆ ಭಾವನೆ ಬಂದ ಕೂಡಲೇ ಜನ ನಮ್ಮನ್ನು ತಿರಸ್ಕರಿಸುತ್ತಾರೆ.

–ಯು.ಆರ್.ಅನಂತಮೂರ್ತಿ

★ಹೆಚ್ಚು ಮಾತನಾಡುವುದು ಒಳಿತಲ್ಲ. ಹೆಚ್ಚು ಸುಮ್ಮನಿರುವುದೂ ಒಳಿತಲ್ಲ. ಹೆಚ್ಚು ಮಳೆ ಆಗುವುದೂ ಒಳ್ಳೆಯದಲ್ಲ. ಹೆಚ್ಚು ಬಿಸಿಲು ಬೀಳುವುದೂ ಒಳ್ಳೆಯದಲ್ಲ.

–ಕಬೀರ

★ನಾನೊಬ್ಬ ಕಣ್ಣಿನ ಡಾಕ್ಟರು ನಿಜ. ಮನುಷ್ಯನ ಹೊರಗಣ್ಣನ್ನು ಚಿಕಿತ್ಸೆ ಮಾಡಬಲ್ಲೆ. ಒಳಗಣ್ಣನ್ನು ಚಿಕಿತ್ಸೆ ಮಾಡುವವರು ಯಾರು?

–ಡಾ.ಎಂ.ಸಿ.ಮೋದಿ

★ಯಾವಾಗ ಮೌನದಿಂದಿರಬೇಕು ಎಂಬುದನ್ನು ತಿಳಿಯದವನಿಗೆ ಯಾವಾಗ ಮಾತನಾಡಬೇಕು ಎಂಬುದೂ ತಿಳಿಯುವುದಿಲ್ಲ.

–ಪಿ.ಸೈರಸ್

★ಮನೆಯಲ್ಲಿರುವುದು ಒಬ್ಬನೇ ಸೇವಕ– ಮನೆಯ ಯಜಮಾನ.

–ಜರ್ಮನ್ ಗಾದೆ

★ಮಾತೃಭಾಷೆಯ ಜ್ಞಾನ ಇಲ್ಲದವರು ಬದುಕಿ ಉಳಿದಿದ್ದಾರೆಯೇ? ನುಡಿಯಿಲ್ಲದ ನಾಡು ಕೊರಡು. ನುಡಿಯೇ ನಾಡಿನ ನಾಡಿ.

–ಮಿರ್ಜಿ ಅಣ್ಣಾರಾಯ

★ಮುದುಕರು ದಡ್ಡರೆಂದು ಯುವಕರು ಯೋಚಿಸುತ್ತಾರೆ; ಆದರೆ ಯುವಕರು ದಡ್ಡರೆಂಬುದು ಮುದುಕರಿಗೆ ಗೊತ್ತು.

–ಜಾನ್ ಚಾಪ್ಮನ್

★ನಿಜವಾದ ರಾಷ್ಟ್ರೀಯತೆ ಮಾನವೀಯತೆಯೇ.

–ಎಚ್.ಜಿ.ವೆಲ್ಸ್

★ರೋಗ ಇರುವುದಾದರೆ ಬೇರೆ ಶತ್ರುಗಳೇಕೆ?

–ಭರ್ತೃಹರಿ

★ ವಿಜ್ಞಾನವೆಂದರೆ ಮನುಷ್ಯನ ಬೌದ್ಧಿಕ ಹಾಗೂ ಕಲಾತ್ಮಕ ಕ್ರಿಯೆಗಳ ಸಮ್ಮಿಳನ. ವಿಜ್ಞಾನ ಅತ್ಯುನ್ನತ ರೀತಿಯ ಸೃಷ್ಟಿ

–ಸಿ.ವಿ.ರಾಮನ್

★ಈಗ ನಾವು ಯಾವುದನ್ನು ವಿಜ್ಞಾನ ಎನ್ನುತ್ತೇವೋ ಅಂತಹ ಜ್ಞಾನ ಸಾವಿರಾರು ವರ್ಷಗಳಿಂದ ಸ್ವಾತಂತ್ರ್ಯವನ್ನು ಗಳಿಸುವುದಕ್ಕೆ ನಾವು ಮಾಡುತ್ತಿರುವ ಪ್ರಯತ್ನ.

–ಸ್ವಾಮಿ ವಿವೇಕಾನಂದ

★ಮಾಡಿ ಮರೆಯೋದು ವಿರಾಗ. ಮಾಡಿ ನೆನಸೋದು ವ್ಯವಹಾರ. ಮಾಡದೆ ಮಾಡಿದ್ದೇನೆ ಎಂದು ಹೇಳಿಕೊಳ್ಳೋದು ಅಪರಾಧ. ಮಾಡಿಯೂ ಮೌನವಾಗಿರುವುದು ದೇವರು. ಮಾಡಿ ಮಾತನಾಡುವವನು ಧಾಂಬಿಕ.

–ಸಿದ್ದೇಶ್ವರ ಸ್ವಾಮಿಗಳು